ದಿನಾಂಕ **16-08-2021** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.

| | | |
|---|---|---|
| ಹೆಸರು | : | ಶೀತಲ |
| ಗಂಡನ ಹೆಸರು | : | ದತ್ತಾ ಬಿರಾದಾರ |
| ವಯಸ್ಸು | : | **26** ವರ್ಷಗಳು, |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಗುತ್ತಿ. |

<u>ವಾದಿ ಪರ ವಕೀಲರಾದ ಶ್ರೀ ಎ.ಎ.ಡಿ ರವರಿಂದ ಸಾಕ್ಷಿಯ ಮುಖ್ಯ ವಿಚಾರಣೆ:-</u>

ನಾನು ಈ ದಿವಸ ನನ್ನ ಮೌಖಿಕ ಸಾಕ್ಷಿಯನ್ನು ಶಪಥ ಪತ್ರದ ರೂಪದಲ್ಲಿ ಈಗ ನ್ಯಾಯಾಲಯದಲ್ಲಿ ಸಲ್ಲಿಸುತ್ತಿದ್ದೇನೆ. ಸದರಿ ಶಪಥ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ ಆ ಕಾರಣ ಅವುಗಳಲ್ಲಿಯ ಅಂಶಗಳು ನಿಜವಿರುತ್ತದೆ. ಸದರಿ ಅಂಶಗಳನ್ನು ಓದಿಸಿ ತಿಳಿದುಕೊಂಡ ಮೇಲೆ ಒಪ್ಪಿ ನನ್ನ ಸಹಿ ಮಾಡಿರುತ್ತೇನೆ ಮತ್ತು ನಾನು ನನ್ನ ಮೌಖಿಕ ಸಾಕ್ಷಿಗೆ ಪೂರಕವಾಗಿ ಕೆಲವೊಂದು ದಾಖಲಾತಿಗಳನ್ನು ಹಾಜರು ಮಾಡುತ್ತಿದ್ದೇನೆ ಮತ್ತು ಅವುಗಳನ್ನು ನಿಶಾನೆಪಡಿಸಲು ಕೋರುತ್ತೇನೆ.

1. ಎಡಿಎಲಆರ್ ಅವರು ನೀಡಿರುವ ಸರ್ವೆ ವರದಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು.
2. ತಹಸೀಲ್ದಾರವರಿಗೆ ನೀಡಿರುವ ಅರ್ಜಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು.
3. ಅಂಚೆ ಸ್ವೀಕೃತಿ. ನಿಪಿ-3 ಎಂದು ಗುರುತಿಸಲಾಯಿತು.
4. ಅಂಚೆ ರಸೀದಿ ಹಾಜರು ಪಡಿಸಿದ್ದು, ನಿಪಿ-4 ಎಂದು ಗುರುತಿಸಲಾಯಿತು.

ಮುಂದು ವರೆದ ಮುಖ್ಯ ವಿಚಾರಣೆ  ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**(ಓ.ಹೇ.ಕೇ.ಸ.ಇದೆ)**

ಸಾಕ್ಷಿದಾರರ ಸಹಿ

ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಬಸವಕಲ್ಯಾಣ